ಪಾವತಿಸಲು ಬಾಕಿ ಇರುತ್ತದೆ.

ಇ, ಈ, ಉ ಮತ್ತು ಊ) ಒಂದು ಸಕ್ಕರೆ ಕಾರ್ಖಾನೆಯು ಸುವ್ಯವಸ್ಥಿತವಾಗಿ ನಡೆಯಬೇಕಾದರೆ ಕಬ್ಬು ಸರಬರಾಜುದಾರರ ಸಹಕಾರ ಬೇಕಾಗುತ್ತದೆ. ಕಾರಣ, ಸಕ್ಕರೆ ಕಾರ್ಖಾನೆಗಳಿಗೆ ಮೂಲ ವಸ್ತುವಾದ ಸತ್ವ ಭರಿತ ಕಬ್ಬು ಅವಶ್ಯವಾಗಿದೆ. ಅದೇ ರೀತಿ ರೈತರಿಗೆ ತಾವು ಬೆಳೆದ ಕಬ್ಬಿಗೆ ಸಮಂಜಸವಾದ ಹಾಗೂ ಸಕಾಲಿಕ ಬೆಲೆ ಬರಬೇಕೆಂದರೆ, ಆರೋಗ್ಯವಾದ ಕಾರ್ಖಾನೆಯೂ ಕೂಡಾ ಇರಬೇಕಾದುದು ಅತ್ಯವಶ್ಯಕವಾಗಿದೆ. ಪರಸ್ಪರ ಹಿತಾಸಕ್ತಿಯನ್ನು ಕಾಪಾಡಿಕೊಂಡು ಹೋಗಬೇಕಾದ ಅಗತ್ಯತೆಯ ವಿಲಕ್ಷಣ ಗುಣ ಈ ಸಕ್ಕರೆ ಉದ್ಯಮದಲ್ಲಿ ಇದೆ. ರೈತರಿಗೆ ಕಬ್ಬಿನ ಬೆಲೆ ಪಾವತಿಸಬೇಕಾದರೆ ಸಕ್ಕರೆ ಮಾರಾಟವಾಗಬೇಕು, ಸಕ್ಕರೆ ಮಾರಾಟವಾಗಬೇಕಾದರೆ ಮಾರುಕಟ್ಟೆಯಲ್ಲಿ ಬೆಲೆ ಚೆನ್ನಾಗಿರಬೇಕು. ಹಾಗೂ ಬೆಲೆ ಚೆನ್ನಾಗಿದ್ದಾಗ ಕೇಂದ್ರ ಸರ್ಕಾರದ ಬಿಡುಗಡೆ ಆದೇಶಗಳು ಕೂಡಾ ತ್ವರಿತವಾಗಿ ಬರಬೇಕಾಗುತ್ತದೆ. ಈ ಪ್ರಕ್ರಿಯೆಯಲ್ಲಿ ವ್ಯತ್ಯಯ ಉಂಟಾದಾಗ ರೈತರಿಗೆ ಕಬ್ಬು ಬೆಲೆ ಪಾವತಿಸುವಲ್ಲಿ ವಿಳಂಬವಾಗುತ್ತದೆ. ಇಂತಹ ಸಮಯದಲ್ಲಿ ಕಾರ್ಖಾನೆಗಳೂ ಸಹ ಬೇರೆ ಬೇರೆ ಮೂಲಗಳಿಂದ ಹಣಕಾಸು ವ್ಯವಸ್ಥೆ ಮಾಡಿಕೊಂಡು ಬಾಕಿ ತೀರುವಳಿ ಮಾಡಲು ಶ್ರಮಿಸುತ್ತಿರುತ್ತವೆ. ಕೆಲವೊಂದು ಸಕ್ಕರೆ ಕಾರ್ಖಾನೆಗಳನ್ನು ಹೊರತುಪಡಿಸಿ, ಬಹುತೇಕ ಕಾರ್ಖಾನೆಗಳು ರೈತರೊಂದಿಗೆ ಮಾಡಿಕೊಂಡ ಒಪ್ಪಂದದಂತೆ ಕಬ್ಬು ಬೆಲೆಯನ್ನು ಪಾವತಿಸುತ್ತಿವೆ. ಕೇಂದ್ರ ಸರ್ಕಾರದ ಕಬ್ಬು ನಿಯಂತ್ರಣ ಆದೇಶದ ಪ್ರಕಾರ ರೈತರು ಕಬ್ಬು ಸರಬರಾಜು ಮಾಡಿದ 14 ದಿನಗಳೊಳಗಾಗಿ ಕಬ್ಬು ಬೆಲೆ ಪಾವತಿ ಮಾಡಬೇಕೆಂಬುದು ಇದ್ದರೂ ಬಹುತೇಕ ಕಾರ್ಖಾನೆಗಳಿಗೆ ಇದು ಮೇಲ್ನೋಟಕ್ಕೆ ಕಾರಣಗಳಿಂದ ಸಾಧ್ಯವಾಗುತ್ತಿಲ್ಲ. ಈ ಕಬ್ಬಿನ ಬೆಲೆ ಬಾಕಿಗೆ ಇನ್ನೂ ಎಂದು ಪ್ರಮುಖ ಅಂಶವೆಂದರೆ ಬಹುತೇಕ ಕಾರ್ಖಾನೆಗಳು ಶಾಸನಬದ್ಧ ಕನಿಷ್ಠ ಬೆಲೆ (ಎಸ್.ಎಂ.ಪಿ) ಗಿಂತಲೂ ಜಾಸ್ತಿ ಕೊಡುತ್ತಿರುವುದಾಗಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಬಾಕಿ ಉಳಿಸಿಕೊಂಡ ಸಕ್ಕರೆ ಕಾರ್ಖಾನೆಗಳಿಗೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿ ಕೂಡಲೇ ಬಾಕಿ ತೀರುವಳಿ ಮಾಡುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ. ಮೇಲಿನ ಎಚ್ಚರಿಕೆಯನ್ನು ಮೀರಿ ಕಬ್ಬು ಬೆಲೆ ಬಾಕಿ ತೀರುವಳಿಯಲ್ಲಿ ವಿಳಂಬ ನೀತಿಯನ್ನು ಅನುಸರಿಸಿದರೆ ಕಬ್ಬು ನಿಯಂತ್ರಣ ಆದೇಶದನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ.

ಬೆಳಗಾಂವ ಜಿಲ್ಲೆ ಸವದತ್ತಿ ತಾಲ್ಲೂಕಿನ ತೆನಿಕೊಳ್ಳ ಪ್ರವಾಸಿ ಕೇಂದ್ರದಲ್ಲಿ ಮೂಲಭೂತ ಸೌಲಭ್ಯ ಒದಗಿಸುವುದು.

ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂವ ಜಿಲ್ಲೆ ಸವದತ್ತಿ ತಾಲ್ಲೂಕಿನ ತೆನಿಕೊಳ್ಳ ಪ್ರವಾಸಿ ಕೇಂದ್ರಕ್ಕೆ ಪ್ರವಾಸಿಗರ ಅನುಕೂಲಕ್ಕಾಗಿ ಕೇಂದ್ರ ಸರ್ಕಾರ ವೇಸೈಡ್ ಫೆಸಿಲಿಟಿಯನ್ನು ಕಟ್ಟಲು ಕ.ಮಾಂಕ 11:ಪಿಸಿಆರ್:ಸಿ(10) 97 ದಿನಾಂಕ 17-12-1997ರ ಮೇರೆಗೆ ರೂ.25.80 ಲಕ್ಷಗಳಿಗೆ ಮಂಜೂರಾತಿ ಕೊಟ್ಟ ಸಂಗತಿ ನಿಜವೇ?

ಆ) ಈ ಕೆಲಸವನ್ನು ಕೈಗೊಳ್ಳಲು ರಾಜ್ಯ ಸರ್ಕಾರ ಪ್ರಥಮ ಹಂತವಾಗಿ ರೂ. 16.00 ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿ ಈ ಕೆಲಸವನ್ನು ಕರ್ನಾಟಕ ಭೂ ಸೇನಾ ನಿಗಮದವರಿಗೆ ವಹಿಸಿದ ಸಂಗತಿ ನಿಜವೇ?

ಇ) ಸದ್ಯಕ್ಕೆ ಈ ಕೆಲಸ ಸ್ಥಗಿತಗೊಂಡಿದ್ದು, ಕೂಡಲೇ ಈ ಕೆಲಸವನ್ನು ಪ್ರಾರಂಭ ಮಾಡಿ ಮುಗಿಸಲು ಯಾವ ಕ್ರಮವನ್ನು ಕೈಗೊಳ್ಳಲಾಗಿದೆ?

ಈ) ಈ ಕಟ್ಟದ ಹೊರಗೆ ಮೂತ್ರಾಲಯ, ಶೌಚಾಲಯ, ಓವರ್‌ಹೆಡ್ ಟ್ಯಾಂಕ್ ಕಟ್ಟಿ ನೀರಿನ ವ್ಯವಸ್ಥೆ ಮತ್ತು ಕಾಂಪೌಂಡ್ ಕಟ್ಟಲು ಸುಮಾರು ರೂ.9.00 ಲಕ್ಷ ಹೆಚ್ಚಿಗೆ ಹಣ ಬೇಕಾಗುತ್ತಿದ್ದು ಕೇಂದ್ರ ಸರ್ಕಾರ ಈಗಾಗಲೇ ರೂ.25.80 ಲಕ್ಷಗಳಿಗೆ ಮಂಜೂರಾತಿ ಕೊಟ್ಟಿರುವುದರಿಂದ ಉಳಿದ ಹಣಕ್ಕೆ ರಾಜ್ಯ ಸರ್ಕಾರ ಮಂಜೂರಾತಿ ನೀಡಿ ಈ ಕೆಲಸವನ್ನು ತೆಗೆದುಕೊಳ್ಳಲು ಅನುಮತಿ ನೀಡಲಾಗುವುದೆ?

ಶ್ರೀ ಆರ್.ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು):

ಅ) ಹೌದು.

ಆ) ಕರ್ನಾಟಕ ಭೂ ಸೇನಾ ನಿಗಮವು ನೀಡಿದ ರೂ. 19.15 ಲಕ್ಷಗಳ ಅಂದಾಜು ಪಟ್ಟಿಯನ್ನು ಕೇಂದ್ರಕ್ಕೆ ಕಳುಹಿಸಲಾಯಿತು. ಕೇಂದ್ರವು ರೂ. 17.20 ಲಕ್ಷಗಳಿಗೆ ಮಂಜೂರಾತಿ ನೀಡಿ ರೂ.5.16 ಲಕ್ಷ ಮೊದಲ ಕಂತನ್ನು ಬಿಡುಗಡೆ ಮಾಡಿರುತ್ತದೆ. ರಾಜ್ಯ ಸರ್ಕಾರದಿಂದ ರೂ.8.60 ಲಕ್ಷ ನೀಡಿ ಒಟ್ಟು ರೂ. 13.76 ಲಕ್ಷಗಳನ್ನು ಈವರೆಗೆ ಕರ್ನಾಟಕ ಭೂ ಸೇನಾ ನಿಗಮದವರಿಗೆ ಬಿಡುಗಡೆ ಮಾಡಲಾಗಿದೆ.

ಇ) ಕರ್ನಾಟಕ ಭೂ ಸೇನಾ ನಿಗಮದ ಅಧಿಕಾರಿಗಳೊಡನೆ ನಡೆದ ಸಭೆಯಲ್ಲಿ ಈ ಯೋಜನಾ ಕಾಮಗಾರಿಯನ್ನು ಶೀಘ್ರವಾಗಿ ಮುಗಿಸಿಕೊಡಲು ತಿಳಿಸಲಾಗಿದೆ.

ಈ) ಕೇಂದ್ರವು ಈ ಸೌಲಭ್ಯಕ್ಕಾಗಿ ಮಂಜೂರಾತಿ ನೀಡಿರುವ ಮೊತ್ತ ರೂ. 17.20 ಲಕ್ಷಗಳು ಕರ್ನಾಟಕ ಭೂ ಸೇನಾ ನಿಗಮವು ಈವರೆಗೆ ಇಲಾಖೆ ಬಿಡುಗಡೆ

ಮಾಡಿರುವ ಒಟ್ಟು ಹಣಕ್ಕೆ ಉಪಯೋಗಿತಾ ಪತ್ರವನ್ನು ನೀಡಿರುತ್ತದೆ. ಇದನ್ನು ಕೇಂದ್ರ ಸರ್ಕಾರಕ್ಕೆ ಇಲಾಖೆಯು ಸಲ್ಲಿಸಿದ್ದು, ಕೇಂದ್ರದಿಂದ ಮುಂದಿನ ಕಂತು ಬಿಡುಗಡೆ ನಿರೀಕ್ಷಿಸಲಾಗಿದೆ. ಒಟ್ಟಾರೆ ಕರ್ನಾಟಕ ಭೂ ಸೇನಾ ನಿಗಮಕ್ಕೆ ನೀಡಬೇಕಾಗಿರುವ ಬಾಕಿ ಮೊತ್ತವು ರೂ. 5. 39 ಲಕ್ಷಗಳು ಮಾತ್ರ.

ರಾಜ್ಯದ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕ್ರೀಡಾಂಗಣ ನಿರ್ಮಾಣ.

1525(1793)

ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ನಗರ ಪ್ರದೇಶಗಳಲ್ಲಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಎಷ್ಟು ಕ್ರೀಡಾಂಗಣಗಳನ್ನು ಕಟ್ಟಲಾಗುತ್ತಿದೆ?

ಆ) ಇವುಗಳಿಗೆ ಕೇಂದ್ರ ಸರ್ಕಾರದ ನೆರವು ಪಡೆಯಲಾಗಿದೆಯೆ; ಪಡೆಯದಿದ್ದಲ್ಲಿ ಕಾರಣ ನೀಡುವುದು?

ಇ) ಬೆಳಗಾಂವ ಜಿಲ್ಲೆ ಬೈಲಹೊಂಗಲ ನಗರದಲ್ಲಿ ಕಟ್ಟಲಾಗುತ್ತಿರುವ ಕ್ರೀಡಾಂಗಣಕ್ಕೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಜಿಲ್ಲಾ ಪಂಚಾಯತ್ ಹಾಗೂ ಸಾರ್ವಜನಿಕರಿಂದ ವಂತಿಗೆ ಕೊಡಿಸಿದ ಹಣವನ್ನು ಖರ್ಚು ಮಾಡಿದ ದಾಖಲೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸದೇ ಇದ್ದದ್ದರಿಂದ ಕೇಂದ್ರ ಸರ್ಕಾರ ತನ್ನ ವಂತಿಗೆಯನ್ನು ಬಿಡುಗಡೆ ಮಾಡದೇ ಇರುವ ಸಂಗತಿ ನಿಜವೇ?

ಈ) ಹಾಗಿದ್ದಲ್ಲಿ, ರಾಜ್ಯ ಸರ್ಕಾರ ಹಣ ಖರ್ಚು ಮಾಡಿದ ದಾಖಲೆಯನ್ನು ಕೇಂದ್ರ ಸರ್ಕಾರಕ್ಕೆ (ಯುಟಿಲೈಜೇಶನ್ ಸರ್ಟಿಫಿಕೇಟ್) ಕಳುಹಿಸಿ ಕೊಡಲಾಗುವುದೇ?

ಉ) ಈಗಾಗಲೇ ಕಳುಹಿಸಿದ್ದಲ್ಲಿ ಎಷ್ಟು ಮೊತ್ತಕ್ಕೆ ಹಾಗೂ ಎಂದು ಕಳುಹಿಸಿಕೊಡಲಾಗಿದೆ. ಎಂಬ ವಿವರ ನೀಡುವುದು?

ಊ) ಈ ಕ್ರೀಡಾಂಗಣದ ಕಾಮಗಾರಿಯನ್ನು ಪೂರ್ಣ ಮುಗಿಸಲು ಸರ್ಕಾರ ಕೈಗೊಂಡ ಕ್ರಮವೇನು? ವಿವರ ನೀಡುವುದು?

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್(ಯುವಜನ ಸೇವೆಗಳು ಮತ್ತು ಕ್ರೀಡಾ ರಾಜ್ಯ ಸಚಿವರು):